**ಕರ್ನಾಟಕ ಸರಕಾರ**
**(ಕಂದಾಯ ಇಲಾಖೆ)**

ಸಂಖ್ಯೆ:ಕಂ/ಇಎನ್‌ಡಿ/ಸಿಆರ್-4/2015-16

ಸಹಾಯಕ ಆಯುಕ್ತರು ಬೀದರ
ಹಾಗೂ ಆಡಳಿತಾಧಿಕಾರಿಗಳು
ಶ್ರೀಕ್ಷೇತ್ರ ಯಲ್ಲಮ್ಮ ದೇವಸ್ಥಾನ
ಬೇನಕನಳ್ಳಿ, ತಾ॥ ಜಿ॥ ಬೀದರ.
ದಿನಾಂಕ: 19.11.2015

## ಬಹಿರಂಗ ಹರಾಜು ಪ್ರಕಟಣೆ

ಬೀದರ ತಾಲೂಕಿನಲ್ಲಿ ಬರುವ ಬೇನಕನಳ್ಳಿ ಗ್ರಾಮದ ಶ್ರೀಕ್ಷೇತ್ರ ಎಲ್ಲಮ್ಮ ದೇವಸ್ಥಾನದ ಆವರಣದೊಳಗಿನ ಅಂಗಡಿ ಒಂದು ಮಳಿಗೆ, ಒಂದು ಹೋಟೆಲ್,ಒಂದು ಸ್ನಾನ ಕುಂಡ ಒಂದು ವರ್ಷದ ಅವಧಿಗಾಗಿ ಲೀಸ್ (ಬಾಡಿಗೆ) ಆಧಾರದ ಮೇಲೆ ವ್ಯಾಪಾರ ಚಟುವಟಿಕೆ ನಡೆಸಲು ಇಚ್ಛೆ ಉಳ್ಳವರನ್ನು ಆಡಳಿತಾಧಿಕಾರಿ, ಶ್ರೀ ಕ್ಷೇತ್ರ ಎಲ್ಲಮ್ಮ ದೇವಸ್ಥಾನ, ಬೆನಕನಳ್ಳಿ ಇವರಿಂದ ದಿನಾಂಕ: 30.11.2015 ರಂದು ಸೋಮವಾರ ಬೆಳಗ್ಗೆ 11:00 ಗಂಟೆಗೆ ಶ್ರೀಕ್ಷೇತ್ರ ಎಲ್ಲಮ್ಮ ದೇವಿ ದೇವಸ್ಥಾನದಲ್ಲಿ ನಡೆಯಲಿರುವ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ. ಕಾರಣ, ಆಸಕ್ತಿಯುಳ್ಳವರು ಹರಾಜಿನಲ್ಲಿ ಭಾಗವಹಿಸಲು ರೂ. 1000/- ಗಳನ್ನು ಪಾವತಿಸಿ ಅರ್ಜಿ ಪಡೆಯಬಹುದು. ತುಂಬಿದ ಅರ್ಜಿಯನ್ನು ಅದೇ ದಿನ ರೂ. 20000/- (ಇಪ್ಪತ್ತು ಸಾವಿರ ಮಾತ್ರ ) ಡಿ.ಡಿ.ಯನ್ನು ಕೃಷ್ಣ ಗ್ರಾಮೀಣ ಬ್ಯಾಂಕ್ ಮುಖ್ಯ ಶಾಖೆ ಬೀದರ ನಲ್ಲಿ ಸಹಾಯಕ ಆಯುಕ್ತರು ಬೀದರ ಹಾಗೂ ಆಡಳಿತಾಧಿಕಾರಿಗಳು ಶ್ರೀಕ್ಷೇತ್ರ ಯಲ್ಲಮ್ಮ ದೇವಸ್ಥಾನ ಬೇನಕನಳ್ಳಿ ರವರ ಹೆಸರಿನಲ್ಲಿ ಪಡೆದು ಅರ್ಜಿಯೊಂದಿಗೆ ಸಲ್ಲಿಸಿ ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಕಾರಣಾಂತರ ಗಳಿಂದ ಡಿ.ಡಿ ಪಡೆಯಲಾಗದವರು ಅರ್ಜಿಶುಲ್ಕ ಮತ್ತು ನಗದು ರೂಪದಲ್ಲಿ ರೂ. 20000/- (ಇಪ್ಪತ್ತು ಸಾವಿರ ಮಾತ್ರ ) ಪಾವತಿಸಿ ಭಾಗವಹಿಸಬಹುದಾಗಿದೆ.

ಹೀಗೆ ಭಾಗವಹಿಸಿದವರಲ್ಲಿ ಅತೀ ಹೆಚ್ಚಿನ ಬೇಡಿಕೆದಾರರಿಗೆ ಸೂಕ್ತ ವೆನಿಸಿದಲ್ಲಿ ಒಂದು ಮಳಿಗೆ, ಒಂದು ಹೋಟೆಲ್,ಒಂದು ಸ್ನಾನ ಕುಂಡ ಹರಾಜಿನಲ್ಲಿ ನೀಡಬಹುದಾಗಿದೆ.

ಒಬ್ಬ ಬೇಡಿಕೆದಾರರಿಗೆ ಒಂದು ಮಳಿಗೆ, ಒಂದು ಹೊಟೆಲ್ ಅಥವಾ ಒಂದು ಸ್ನಾನ ಕುಂಡ ಮಾತ್ರ ನೀಡಲಾಗುವುದು.

ಈ ಮೊದಲು ಹರಾಜು ಪಡೆದು ಸರ್ಕಾರಕ್ಕೆ/ದೇವಸ್ಥಾನಕ್ಕೆ ಸಂದಾಯ ಮಾಡಬೇಕಾದ ಬಾಕಿ ಹಣ ವನ್ನು ಪೂರ್ತಿಯಾಗಿ ಸಂದಾಯ ಮಾಡದೇ ಇದ್ದಂತಹ ವ್ಯಕ್ತಿ ಅಥವಾ ಯಾವುದೇ ಕುಟುಂಬದ ಹೆಸರಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.

ಅರ್ಜಿ ಶುಲ್ಕವಾಗಿ ಪಡೆದ ರೂ. 1000/- (ಒಂದು ಸಾವಿರ ರೂಪಾಯಿಗಳನ್ನು ) ಹಿಂದಕ್ಕೆ ಪಡೆಯಲು ಅವಕಾಶವಿರುವುದಿಲ್ಲ.

ಪುಟ . . . 2ಕ್ಕೆ

ಹರಾಜಿನಲ್ಲಿ ಬಿಡಲಾದ ಮೊತ್ತದ ಅರ್ಧ ಭಾಗದ ಹಣವನ್ನು ಡಿ.ಡಿ./ ನಗದು ರೂಪದಲ್ಲಿ ಪಡೆದ ರೂ. 32000/-ಗಳನ್ನೊಳಗೊಂಡಂತೆ 50% ಹಣವನ್ನು ಮೂರು ದಿವಸ ಗಳೊಳಗಾಗಿ ಪಾವತಿಸತಕ್ಕದ್ದು.

ಉಳಿದ 50% ಹಣವನ್ನು ಹರಾಜು ಪಡೆದ 6 ತಿಂಗಳೊಳಗಾಗಿ ಪಾವತಿಸತಕ್ಕದು. 6 ತಿಂಗಳ ಅವಧೀಗಾಗಿ ಬೇಡಿಕೆದಾರರ ಅಥವಾ ಅವರ ಹಿತಾಸಕ್ತಿ ಉಳ್ಳವರ ಹೆಸರು/ಮಾಲಿಕತ್ವದಲ್ಲಿರುವ 2 ಎಕರೆ ಗಿಂತ ಕಡಿಮೆ ಇಲ್ಲದ ಪಹಣಿ ಪತ್ರಿಕೆಯನ್ನು ಜಮಾನತದಾರನು ಖುದ್ದಾಗಿ ಹಾಜರಾಗಿ ತನ್ನ ಭಾಚಿತ್ರದೊಂದಿಗೆ ಸಲ್ಲಿಸ ತಕ್ಕದ್ದು.

ಹರಾಜು ಮುಂದುಡುವ, ರದ್ದುಪಡಿಸುವ,ಹರಾಜು ನಡೆಯುವ, ಹರಾಜಿನಲ್ಲಿ ಬಿಡುಗಡೆ ಮಾಡುವ ಹಕ್ಕನ್ನು ಸಹಾಯಕ ಆಯುಕ್ತರು ಬೀದರ ಇವರು ಉಳಿಸಿಕೊಂಡಿರುತ್ತಾರೆ.

19.11.2015

ತಹಸೀಲ್ದಾರರು ಬೀದರ
ಹಾಗೂ ಕಾರ್ಯದರ್ಶಿಗಳು,
ಶ್ರೀಕ್ಷೇತ್ರ ಎಲ್ಲಮ್ಮ ದೇವಸ್ಥಾನ ಬೆನಕನಳ್ಳಿ
ತಾ॥ ಜಿ॥ ಬೀದರ.

ಸಹಾಯಕ ಆಯುಕ್ತರು ಬೀದರ
ಹಾಗೂ ಆಡಳಿತಾಧಿಕಾರಿಗಳು
ಶ್ರೀ ಕ್ಷೇತ್ರ ಎಲ್ಲಮ್ಮ ದೇವಸ್ಥಾನ ಬೆನಕನಳ್ಳಿ
ತಾ॥ ಜಿ॥ ಬೀದರ

ಇವರಿಗೆ,
ಮಾನ್ಯ ಸಹಾಯಕ ನಿರ್ದೇಶಕರು,
ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖೆ,
ಬೀದರ ಇವರಿಗೆ ಕಳುಹಿಸುತ್ತಾ,
ಸ್ಥಳೀಯ ಎರಡು ದಿನ ಪತ್ರಿಕೆಗಳಲ್ಲಿ ಸತತವಾಗಿ
ಮೂರು ದಿನಗಳ ವರೆಗೆ ಪ್ರಕಟಿಸುವಂತೆ ಕೋರಲಾಗಿದೆ.

<u>ಪ್ರತಿಯನ್ನು:-</u>

1) ತಹಸೀಲ್ದಾರರು ಬೀದರ ಹಾಗೂ ಕಾರ್ಯದರ್ಶಿಗಳು, ಶ್ರೀ ಕ್ಷೇತ್ರ ಎಲ್ಲಮ್ಮ ದೇವಸ್ಥಾನ ಬೆನಕನಳ್ಳಿ ತಾ॥ಜಿ॥ಬೀದರ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.
2) Dstict informetic officer NIC ಶಾಖೆ ಜಿಲ್ಲಾಧಿಕಾರಿಗಳ ಕಛೇರಿ ಬೀದರ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.
3) ಇದರ ಒಂದು ಪ್ರತಿ ಯನ್ನು ಶ್ರೀ ಬಸವರಾಜ ವ್ಯವಸ್ಥಾಪಕರು ಶ್ರೀ ಕ್ಷೇತ್ರ ಎಲ್ಲಮ್ಮ ದೇವಸ್ಥಾನ ತಾ॥ಜಿ॥ ಬೀದರ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
4) ಕಂದಾಯ ನೀರಿಕ್ಷಕರು ಹಾಗೂ ಗ್ರಾಮ ಲೆಕ್ಕಾಧಿಕಾರಿಗಳು ಇವರ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

19.11.2015

ತಹಸೀಲ್ದಾರರು ಬೀದರ
ಹಾಗೂ ಕಾರ್ಯದರ್ಶಿಗಳು,
ಶ್ರೀಕ್ಷೇತ್ರ ಎಲ್ಲಮ್ಮ ದೇವಸ್ಥಾನ ಬೆನಕನಳ್ಳಿ
ತಾ॥ ಜಿ॥ ಬೀದರ.

ಸಹಾಯಕ ಆಯುಕ್ತರು ಬೀದರ
ಹಾಗೂ ಆಡಳಿತಾಧಿಕಾರಿಗಳು
ಶ್ರೀ ಕ್ಷೇತ್ರ ಎಲ್ಲಮ್ಮ ದೇವಸ್ಥಾನ ಬೆನಕನಳ್ಳಿ
ತಾ॥ ಜಿ॥ ಬೀದರ